## ನನ್ನ ಓದು

ಈ ಹಿನ್ನೆಲೆಯಲ್ಲಿ ಇವರ ಶ್ರೇಷ್ಠರ ರಚನೆಗಳಲ್ಲಿ ಎರಡು ಕವಿತೆಗಳೆಂದರೆ 'ಬಾಗ್ದಾದ್ ಒಂದು ಪಾರ್ಥನೆ' ಹಾಗೂ 'ಸಮಗಾರ ಭೀಮವ್ವ' ಕವಿತೆಯನ್ನು ನೋಡಬಹುದು.

ಮನುಕುಲದ ದುರಂತದ ಮೂಲ ಯಾವುದು?

ಹಿಂಸೆಯ ಜೊತೆಗೆ ಯಾಕೆ ಮನುಷ್ಯನಿಗೆ ಬಿಡಿಸಲಾಗದ ಸಂಬಂಧವಿದೆ, ನಾಗರಿಕತೆಯ ಎಷ್ಟೆಲ್ಲಾ ದುರಂತಗಳು ಯಾಕಾಗಿ ಮನುಷ್ಯನಿಗೆ ಶಾಂತಿಯ ಪಾಠವನ್ನು ಕಲಿಸಲಾಗಿಲ್ಲ. ಹಿಂಸೆಯೇ ಮನುಷ್ಯನ ಮೂಲಧಾತುವೆ ಎನ್ನುವ ಪ್ರಶ್ನೆ ಶಿವಪ್ರಕಾಶರ ಕಾವ್ಯದಲ್ಲಿ ಮತ್ತೆ ಮತ್ತೆ ಅನುರಣಿತವಾಗುತ್ತದೆ. ಹಿಂಸೆ ಮತ್ತು ಶಾಂತಿಯ ನಡುವೆ ಮನುಷ್ಯನ ಆಯ್ಕೆ ಯಾವಾಗಲೂ ಯಾಕೆ ಹಿಂಸೆಯೇ ಆಗಿರುತ್ತದೆ? ಶಾಂತಿಯನ್ನು ಪಡೆಯುವ ಪ್ರಯತ್ನ ಯಾವಾಗಲೂ ಯಾಕೆ ಹಿನ್ನಡೆಯನ್ನೇ ಪಡೆಯುತ್ತದೆ? ಶಾಂತಿಯು ಅಸಹಾಯಕವಾಗಿ ಹಿಂಸೆಯು ಯಾಜಮಾನಿಕೆಯನ್ನು ನಡೆಸುವ ಸ್ಥಿತಿ ಶಾಶ್ವತ ಎನ್ನುವ ಸ್ಥಿತಿಯನ್ನು ನಾಗರಿಕತೆ ನಿರಂತರವಾಗಿ ಎದುರಿಸುತ್ತಾ ಬಂದಿದೆ. ಏನಿದ್ದೂ ಹಿಂಸೆಯನ್ನು ಮೀರಿಕೊಳ್ಳಲು ಮಾನವ ಜನಾಂಗಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ? ಇದನ್ನು ಎದುರಾಗುವ ಬಗೆ ಹೇಗೆ?

ಆಕಾಶದ ಬಾಂಬರುಗಳು ಎರಗುತ್ತಿರುವಾಗ
ಮಗು ಇರುಕಿಕೊಂಡು ಎಡ ಕಂಕುಳಲ್ಲಿ
ಬಂದೂಕು ಇನ್ನೊಂದು ಕೈಯಲ್ಲಿ
ಈ ಸ್ಥಿತಿಯಲ್ಲು ಕಂದನಿಗೆ ಹಾಲೂಡುತ್ತಿದ್ದ
ವಿಯೆತ್ನಾಂ ತಾಯ ಧೀರ ವಾತ್ಸಲ್ಯವನ್ನು
(ಬಾಗ್ದಾದ್: ಒಂದು ಪ್ರಾರ್ಥನೆ – 'ಸೂರ್ಯಜಲ' ಸಂಕಲನ)

ಜಗತ್ತಿನ ತಲ್ಲಣಗಳಿಗೆ ಪರಿಹಾರ ಎಲ್ಲಿದೆ? ಯಾರು ಕೊಡ ಬಲ್ಲರು? ಸಾವಿನ ಹೊಸ್ತಿಲಲ್ಲೂ ತಾಯ್ತನದ ಪೊರೆಯುವ ಆ ತಾಯೆ? ಕತ್ತಿ ನೆತ್ತಿಯ ಮೇಲೆ ತೂಗುತ್ತಿದ್ದರೂ ದೈವಸೃಷ್ಟಿಯ ರಂಗುರೂಪಗಳನ್ನು ಅಚ್ಚಳಿಯದ ಹಾಗೆ ಚಿತ್ರಿಸುವುದರಲ್ಲಿ ತನ್ಮಯನಾದ ಮೈಕೆಲ್ ಎಂಜೆಲೋನ ವರ್ಣ ಸಮಾಧಿಯೆ?

ಶಿವಪ್ರಕಾಶರ ಕಾವ್ಯ ಸತತವಾಗಿ ರಕ್ಷಕ ಶಕ್ತಿಗಳನ್ನು ಹುಡುಕುತ್ತಿದೆ. ಇವರ ಕಾವ್ಯ ಮೂರು ಆಶ್ರಯ ತಾಣಗಳನ್ನು ಹುಡುಕುತ್ತಾ ಅವುಗಳ ಬಗೆಗಿನ ನಂಬಿಕೆಯನ್ನು ಗಟ್ಟಿ ಮಾಡಿಕೊಳ್ಳಲು ನಿರಂತರವಾಗಿ ಯತ್ನಿಸುತ್ತಲೇ ಇದೆ. ನಂಬಿಕೆ ಅಪನಂಬಿಕೆಗಳ ನಡುವೆ, ಆಸೆ ನಿರಾಸೆಗಳ ನಡುವೆ, ಆತಂಕ ಸಂಭ್ರಮಗಳ ನಡುವೆ ಜೀಕುತ್ತಲೇ ಇದೆ. ಸಮಗ್ರ ಕಾವ್ಯದ ಆರಂಭದಲ್ಲಿ ಇವರು ಹಾಕಿರುವ ಭಿನ್ನ ಕವಿಗಳ ಉದ್ಗಾರಗಳು ಶಿವಪ್ರಕಾಶರ ಉದ್ಗಾರಗಳೂ ಆಗಿವೆ. ನೆಲವೆಲ್ಲ ಹೊನ್ನಗಣಿಯಾಗುವವರೆಗೆ ಯಾನವನ್ನು ಸಯದಿಂದ ಮಾಡಬೇಕು ಎನ್ನುವ ರೂಮಿಯ ಮಾತಾಗಲೀ, ಇರುಳಿನ ಮುಖದಲ್ಲೂ ನವರತ್ನದ ಹಾರವಡಗಿತ್ತು ಎನ್ನುವ ಅಲ್ಲಮನ ಮಾತಾಗಲೀ ಕಾವ್ಯವೆನ್ನುವುದು ಮೊದಲಿಗೂ ಕೊನೆಗೂ ಜೀವನ್ಮುಖಿಯಾದುದು ಎನ್ನುವ ಆದಿಮ ಸತ್ಯವನ್ನು ಇವರೂ ನೆಚ್ಚಿದ್ದಾರೆ ಎನ್ನುವುದನ್ನೇ ಹೇಳುತ್ತದೆ. ಕೆ.ಎಸ್. ನರಸಿಂಹಸ್ವಾಮಿ ಅವರು ಶಿವಪ್ರಕಾಶರ ಪ್ರೀತಿಯ ಕವಿ.

ಪ್ರೀತಿಗೆ ಶಾಂತಿಗೆ ಜಯವಿಹುದೆಂದು
ನಾಳಿನ ಬಾಗಿಲು ನಂದನವೆಂದು
ಎಲ್ಲರಿಗೊಳಿತನು ಬಯಸಲಿ ಕವನ